**ಸಾಕ್ಷಿಯನ್ನು ದಿನಾಂಕಃ 19-02-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸ್ವತಃ**

ನನ್ನ ಕೇಸಿಗೆ ಪೂರಕವಾಗಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವೆನು. ಸಾಕ್ಷಿಯು ಹಾಜರುಪಡಿಸಿದ ಹಾಗೂ ನ್ಯಾಯಾಲಯವು ನಿಶಾನೆಗೊಳಿಸಿರುವ ದಾಖಲೆಗಳನ್ನು ಈ ಕೆಳಗಿನಂತೆ ಗುರುತಿಸಲಾಗಿದೆ.

**ನಿಪಿ-7** : ದೃಡೀಕೃತ ಕ್ರಯ ಪತ್ರ

**ನಿಪಿ-8** : ನಡವಳಿಕೆಗಳು

**ನಿಪಿ-9** : ಕರ ಪಾವತಿ ರಶೀದಿ

ಇದರೊಂದಿಗೆ ಸಾಕ್ಷಿಯು ಪೊಟೋಗಳನ್ನು ಮತ್ತು ಅದಕ್ಕೆ ಸಂಬಂದಿಸಿದತ ರಶೀದಿಗಳನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಿಂದ**

1. ನನ್ನ ಮಗನಾದ ಕಾಲಪುತ್ರ ಇವರ ಹೆಸರಿನಲ್ಲಿ 3 ನಿವೇಶನಗಳು ಇವೆ. ಈ ದಾವಾ ಶೆಡ್ಯೂಲಿನಲ್ಲಿ ಸದರಿ 3 ನಿವೇಶನಗಳು ಇವೆ. ನನ್ನ ಮಗ ಕಾಲಪುತ್ರ ಈ ಪ್ರಕರಣದಲ್ಲಿ ವಾದಿಯಾಗಿರುವುದಿಲ್ಲ. ನಾನು ವಾದ ಪತ್ರದಲ್ಲಿ 4 ಡೋರ ನಂಬರುಗಳಿಗೆ ಸಂಬಂದಿಸಿದಂತೆ ಪರಿಹಾರ ಕೇಳಿದ್ದೇನೆ. ಸದರಿ 4 ಡೋರ ನಂಬರುಗಳಿಗೆ ಪಶ್ಚಿಮದ ಚೆಕ್ಕು ಬಂದಿ ಒಂದೇ ಆಗಿರುತ್ತದೆ. ಅದು ವಿವಾದಿತ ರಸ್ತೆಯಾಗಿರುತ್ತದೆ. ಉಳಿದ ಚೆಕ್ಕು ಬಂದಿಗಳು ಬೇರೆ ಬೇರೆ ಇರುತ್ತವೆ. ನಾನು ಮೇಲೆ ಹೇಳಿದ ವಿಚಾರವನ್ನು ವಾದ ಪತ್ರದಲ್ಲಿ ಬರೆಸಿರುವುದಿಲ್ಲ ಅದರ ಅವಶ್ಯಕತೆ ಇರುವುದಿಲ್ಲ. ಸಮುದಾಯ ಭವನ ನಿರ್ಮಾಣ ಆಗಿದೆ ಎಂದು ಸೂಚಿಸುವ

ದಾಖಲೆಯನ್ನು ನಾನು ಕೊಟ್ಟಿರುವುದಿಲ್ಲ ಅದರ ಅವಶ್ಯಕತೆ ಇರುವುದಿಲ್ಲ. ವಿವಾದಿತ ರಸ್ತೆಯ ಪಶ್ಚಿಮಕ್ಕೆ ಇರುವ ಜಾಗ ಪಾರ್ಕ ಎಂದು ತೋರಿಸಲು ದಾಖಲೆಯನ್ನು ಸಲ್ಲಿಸಿರುತ್ತೇನೆ ಅಂದರೆ ಸ್ಕೆಚ್ಚನ್ನು ಸಲ್ಲಿಸಿರುತ್ತೇನೆ. ನಾನು ಸಲ್ಲಿಸಿರುವ ಸ್ಕೆಚ್ಚನಲ್ಲಿ ಪಾರ್ಕ ಅಗಲೀ ಸಮುದಾಯ ಭವನವಾಗಲೀ ಕಂಡು ಬರುವುದಿಲ್ಲ ಅಂದರೆ ಈಗ ಪಾರ್ಕ ಇರುವುದಿಲ್ಲ. ಆದರೆ ಸಮುದಾಯ ಭವನ ಇರುವುದು.

2. ಸಮೂರು 30 ಅಡಿಗಳಷ್ಟು ಪೂರ್ವ ಪಶ್ಚಿಮ ರಸ್ತೆ ಜಾಗ ಒತ್ತುವರೆಯಾಗಿರುತ್ತದೆ. ನಾವು ಒತ್ತುವರಿ ಆಗಿದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಸಲ್ಲಿಸಿರುವುದಿಲ್ಲ. ಶ್ರೀನಿವಾಸ ಮೂರ್ತಿಯವರು ನನ್ನ ಮಗನ ಮೇಲೆ ಗುಂಡಾಗಿರಿ ಮಾಡಿದರು ಎಂದು ನಾನು ಮೇಲಾಧಿಕಾರಿಗಳ ಗಮನಕ್ಕೆ ತಂದಿರುತ್ತೇನೆ. ಆ ಬಗ್ಗೆ ದಾಖಲೆ ಇರುತ್ತದೆ. ದಾಖಲೆಗಳು ಇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಶ್ರೀನಿವಾಸ ಮೂರ್ತಿಯವರು ಗುಂಡಾಗಿರಿ ಮಾಡಿರುವರು ಎಂದು ಸಹಾಯಕ ಆಯುಕ್ತರಿಗೆ ಲಿಖಿತ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಚರಂಡಿಯನ್ನು 30 ಅಡಿ ಜಾಗ ಬಿಟ್ಟು ಯಾವುದೇ ಜಾಗವನ್ನು ಒತ್ತುವರಿ ಮಾಡದೇ ಪುರಸಬೆಯವರು ನಿರ್ಮಾಣ ಮಾಡಿರುವರು ಅಂದರೆ ಸರಿಯಲ್ಲ. ಸಾರ್ವಜನಿಕ ಹಿತಾಸಕ್ತಿಗಾಗಿ ಚರಂಡಿ ಕಾರ್ಯ ಮಾಡಿರುವರು ಅಂದರೆ ಸರಿಯಲ್ಲ.

3. ಪುರಸಬೆಯವರು ನನಗೆ ಯಾವುದೇ ತೊಂದರೆ ನೀಡಿರುವುದಿಲ್ಲ ಅಂದರೆ ಸರಿಯಲ್ಲ. ಕಿರುಕುಳ ನೀಡಿರುವರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಈ ಪ್ರರಕಣದಲ್ಲಿ ಪುರಸಬೆಯವರು ಕಿರುಕುಳ ನೀಡಿದ ಸಂಬಂದ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ ಅದರ ಅವಶ್ಯಕತೆ ಇರುವುದಿಲ್ಲ. ಅವಶ್ಯಕ ಪಕ್ಷಗಾರರನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ

ಅಂದರೆ ಸರಿಯಲ್ಲ. ಆ ಕಾರಣ ಈ ದಾವೆಯು ನಿಲ್ಲುವುದಿಲ್ಲ ಅಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಯಲ್ಲಿ ಚರಂಡಿ ಕಾರ್ಯವನ್ನು ನಿಲ್ಲಿಸುವಂತೆ ಕೋರಿದ್ದೆ ಆದರೆ ಅದು ಪೆಂಡಿಗ್ ಇರುವಾಗ ಚರಂಡಿ ಕಾರ್ಯ ಮುಗಿದು ಹೋಗಿರುತ್ತದೆ.

4. ಅತಿಕ್ರಮಣ ಮಾಡಿದವರ ಎಲ್ಲರನ್ನು ನಾನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಅಂದರೆ ಅವರ ರಸ್ತೆಯ ವಿಚಾರಕ್ಕೆ ಸಂಬಂದ ಪಡದ ಕಾರಣ ಮಾಡಿರುವುದಿಲ್ಲ. ಮುಖ್ಯ ಅಧಿಕಾರಿಯವರನ್ನು ಆರಂಭದಲ್ಲಿ ಪಕ್ಷಗಾರರನ್ನಾಗಿ ವಾಡದೇ ಇರುವ ಕಾರಣ  ಆ ಸಮಯದಲ್ಲಿ ವಕೀಲರು ಹಾಜರಾಗುವ ಪ್ರಶ್ನೆ ಉದ್ಭವಿಸುವುದಿಲ್ಲ ಅಂದರೆ ಸರಿಯಲ್ಲ. ದಾವೆ ಹಾಕುವ ಪೂರ್ವದಲ್ಲಿ ನಾನು ಪುರಸಬೆಗೆ ಯಾವುದೇ ನೋಟೀಸು ನೀಡಿರುವುದಿಲ್ಲ ಆದರೆ ಮನವಿ ಸಲ್ಲಿಸಿರುತ್ತೇನೆ.

5. ನಾವು ನಿವೇಶನಗಳನ್ನು ಎಂ.ಶಿವಣ್ಣ ಇವರಿಂದ ಖರೀದಿ ಮಾಡಿದ್ದೇನೆ. ನಾವು ಶಿವಣ್ಣ ಇವರಿಂದ ಖರೀದಿ ಮಾಡಿದ ಖರೀದಿ ಪತ್ರದಿಲ್ಲರುವ ಚೆಕ್ಕು ಬಂದಿಗಳು ಮತ್ತು ದಾವಾ ಶೆಡ್ಯೂಲಿನಲ್ಲಿ ಕಾಣಿಸಿರುವ ಚೆಕ್ಕು ಬಂದಿಗಳು ಬೇರೆ ಬೇರೆ ಆಗಿರುತ್ತವೆ ಅಂದರೆ ಸರಿಯಲ್ಲ. ಒತ್ತುವರಿ ಮಾಡಿ ಚರಂಡಿ ನಿರ್ಮಾಣ ಆಗಿದೆ ಎಂದು ತೋರಿಸಲು ನಾನು ನಕಾಶೆಯನ್ನು ಸಲ್ಲಿಸಿರುವುದಿಲ್ಲ ಅವಶ್ಯಕತೆ ಅನಿಸಿದರೆ ಅದನ್ನು ನ್ಯಾಯಾಲಯವೇ ಮಾಡಬೇಕಾಗುತ್ತದೆ. ನಾನು ಸಲ್ಲಿಸಿರುವ ಖರೀದಿ ಪತ್ರದಲ್ಲಿ ಪೂರ್ವಕ್ಕೆ ಸರ್ಕಾರಿ ಜಾಗ ಇದೆ ಉಲ್ಲೇಖ ಇದೆ ಅಂದರೆ ಸರಿ. ಅದರಲ್ಲಿ ಸಾರ್ವಜನಿಕರು ಮನೆ ಕಟ್ಟಿಕೊಂಡಿರುವರು. ಆ ರೀತಿ ಮನೆಗಳು ಇವೆ ಎಂದು ತೋರಿಸಲು ದಾಖಲೆಗಳನ್ನು ಸಲ್ಲಿಸಿರುವುದಿಲ್ಲ ಅಲ್ಲಿ ಯಾವುದೇ ಮನೆಗಳು ಇಲ್ಲ ಅಂದರೆ ಸರಿಯಲ್ಲ. ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

6. ದಾವಾ ಅಸ್ತಿಯ ಪಶ್ಚಿಮಕ್ಕೆ ರಸ್ತೆ ಇರುವುದು. ಅದು ಪುರಸಬೆ ರಸ್ತೆ ಅಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು. )

**ಓ ಹೇ ಕೇ ಸರಿಯಿದೆ.**

19.02.2026

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

ಸಾಕ್ಷಿಯ ಸಹಿ 19.02.2026